ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ ಬೇರೆ ಸಮಯದಲ್ಲಿ ಮಾತನಾಡುವುದಕ್ಕೆ ಬಿಡುವುದಿಲ್ಲ. ಶೂನ್ಯ ವೇಳೆಯಲ್ಲಿಯೂ ಮಾತನಾಡ ಬೇಡಿಯೆಂದರೆ ನಮ್ಮ ಸಮಸ್ಯೆಗಳನ್ನು ಯಾವಾಗ ಹೇಳಿಕೊಳ್ಳಬೇಕು.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಯಲ್ಲಿ ತರಬಹುದು.

ಶ್ರೀ ವೆಂಕಟರಾವ್ ನಾಡಗೌಡ : ನಮಗೆ ಬಜೆಟ್‌ನಲ್ಲಿಯೂ ಮಾತನಾಡು ವುದಕ್ಕೆ ಅವಕಾಶ ಸಿಕ್ಕುವುದಿಲ್ಲ. ಈಗ ಶೂನ್ಯವೇಳೆಯಲ್ಲಿಯೂ ಕೇಳಬೇಡಿ ಎಂದರೆ ಹೇಗೆ?

ಅಧ್ಯಕ್ಷರು : 24 ಗಂಟೆಗಳಲ್ಲಿ ನಡೆದ ಘಟನೆಗಳ ಬಗ್ಗೆ ಚರ್ಚೆ ಮಾಡುವುದೆಂದು ಶೂನ್ಯ ವೇಳೆಯಲ್ಲಿ ನಿಯಮವಿದೆಯಲ್ಲ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಶ್ರೀ ವೆಂಕಟರಾವ್ ನಾಡಗೌಡರು ಸಿಂಧನೂರು ನಗರದಲ್ಲಿ ಕೊಳಚೆ ಪ್ರದೇಶಗಳಲ್ಲಿ ಒಳಚರಂಡಿ, ಕುಡಿಯುವ ನೀರು, ವಿದ್ಯುತ್ ಕಾಮಗಾರಿ ಪ್ರಾರಂಭಿಸಿದ್ದು, ರಸ್ತೆಗಳನ್ನು ದುರಸ್ತಿ ಮಾಡಿಲ್ಲ. ಕಾಮಗಾರಿ ಪ್ರಾರಂಭಿಸದಿರುವುದರಿಂದ ಸ್ಥಳೀಯ ನಗರ ಸಭಾ ಸದಸ್ಯರ ಮೇಲೆ ಸಾರ್ವಜನಿಕರು ಹಲ್ಲೆಗೆ ಪ್ರಯತ್ನಿಸಿ ದ್ದಾರೆಂಬ ವಿಷಯವನ್ನು ಗಮನಕ್ಕೆ ತಂದಿದ್ದಾರೆ ನಾನು ಈಗ ನಮ್ಮ ಅಲ್ಲಿನ ಪುರಸಭೆಯ ಮತ್ತು ನಗರ ಸಭೆಯ ಆಯುಕ್ತರಿಗೆ ಹೇಳಿ ತಕ್ಷಣ ಕಾಮಗಾರಿ ಯನ್ನು ತೆಗೆದುಕೊಳ್ಳುವಂತೆ ಹೇಳಿ, ಪ್ರಾರಂಭ ಮಾಡಿಸುತ್ತೇನೆ.

ಅಧ್ಯಕ್ಷರು : ಶ್ರೀ ಗೂಳಿಹಟ್ಟಿ ಶೇಖರ್‌ರವರು ಮಾತನಾಡಿ.

10) ವಿಷಯ : ಕರ್ನಾಟಕ ರಾಜ್ಯದ ಅಂಗನವಾಡಿಗಳಿಗೆ ಆಹಾರ ಸರಬರಾಜು ಮಾಡುತ್ತಿರುವ ಕ್ಷಿಪ್ರ ಸಂಸ್ಥೆಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸುವ ಬಗ್ಗೆ

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ಮೊನ್ನೆ ನನ್ನ ಕ್ಷೇತ್ರದಲ್ಲಿ ಮತಾಂತರ ಆಗುವುದರ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ದಯಮಾಡಿ ಗೃಹ ಸಚಿವರು ಇದರ ಬಗ್ಗೆ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಮಕ್ಕಳಿಗೆ ಆಹಾರ ಪೂರೈಸಲು ಮೀಸಲಿಟ್ಟಿರುವ ಕೋಟ್ಯಾಂತರ ರೂಪಾಯಿ.....

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಅದೊಂದು ಉತ್ತರ ಕೊಡುತ್ತಾರೆ. ಇದಾದ ಮೇಲೆ ಕೊಡುವುದಕ್ಕೆ ಹೇಳಿ.

ಅಧ್ಯಕ್ಷರು : ಎಷ್ಟು ಕೊಡುವುದು? ಶೂನ್ಯ ವೇಳೆಗೆ ಒಂದು ಕೊಡಬಹುದಷ್ಟೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮೊನ್ನೆ ಕೊಟ್ಟಿದ್ದೆ.

ಅಧ್ಯಕ್ಷರು: ನನಗೆ ಕೊಟ್ಟಿಲ್ಲ. ಅದು ಪಟ್ಟಿಯಲ್ಲಿಲ್ಲ.

ಶ್ರೀ ಆರ್. ಅಶೋಕ್ (ಗೃಹ ಸಚಿವರು) : ಮತಾಂತರದ ಬಗ್ಗೆ ಇದೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ ನಿನ್ನೆ ಪತ್ರಿಕೆಯಲ್ಲಿ ಬಂದಿದೆ. ನಿನ್ನೆ ಕೊಟ್ಟಿದ್ದೆ, ಆದರೆ ಅದು ಇವತ್ತು ಬಂದಿದೆ.

ಅಧ್ಯಕ್ಷರು : ಅದು ಪಟ್ಟಿಯಲಿಲ್ಲ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಅದಕ್ಕೆ ನಾಳೆ ಉತ್ತರ ಕಳುಹಿಸಿ. ಈಗ ಕೇಳಿದ್ದು ಕ್ರಿಸ್ಟಿ ಸಂಸ್ಥೆಯೆಂದು ಹೇಳಿ ಅಂಗನವಾಡಿ ಸಂಸ್ಥೆಗಳಿಗೆ ಆಹಾರವನ್ನು ಸರಬರಾಜು ಮಾಡುತ್ತಾರೆ. ನಿನ್ನೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ಅದರ ಮುಖಾಂತರ ನನ್ನ ಕ್ಷೇತ್ರದಲ್ಲಿ ಸುಮಾರು ನಾಲ್ಕೈದು ಮಕ್ಕಳು ಆಸ್ಪತ್ರೆ ಸೇರಿ ಅದರಲ್ಲಿ ಒಂದು ಮಗು ಸತ್ತು ಹೋಗಿದೆ. ಇಡೀ ರಾಜ್ಯದಲ್ಲಿ ಬಹಳಷ್ಟು ಪ್ರಕರಣಗಳಾಗುತ್ತಿದೆ. ಈ ಸಂಸ್ಥೆಗೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇಲೆ ತಮಿಳುನಾಡಿನಲ್ಲಿ ಆಹಾರ ಸರಬರಾಜು ಮಾಡುವುದಕ್ಕೆ ಬ್ಯಾನ್ ಮಾಡಿದ್ದಾರೆ. ಬ್ಯಾನ್ ಆದಂತಹ ಸಂಸ್ಥೆಗೆ ಆಹಾರ ಸರಬರಾಜು ಮಾಡುವುದಕ್ಕೆ ಕರ್ನಾಟಕ ರಾಜ್ಯದಲ್ಲಿ ಅವಕಾಶ ಮಾಡಿಕೊಟ್ಟು ಸುಮಾರು 4900 ಪ್ರಕರಣಗಳು ರಾಜ್ಯದಲ್ಲಿ ಆಹಾರವನ್ನು ತಿಂದು, ಬಾಣಂತಿಯರಿರಬಹುದು, ಮಕ್ಕಳಿರಬಹುದು hospitalize ಆಗಿದ್ದಾರೆ. ದಯಮಾಡಿ ಈ ಬಗ್ಗೆ ಸರ್ಕಾರ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಮೂಲಕ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಉತ್ತರ ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಸದಸ್ಯರು ವಿಶೇಷವಾಗಿ ತಮಿಳುನಾಡಿನಲ್ಲಿ ನಿಷೇಧಕ್ಕೆ ಒಳಪಟ್ಟಿರುವ ಕ್ರಿಸ್ಟಿ ಪ್ರೈಡ್ ಗ್ರಾಮ್ ಕಂಪನಿ ಅವರಿಗೆ ಗುತ್ತಿಗೆ ಕೊಟ್ಟಿರುವುದು ಕೂಡ ಸಂಶಯ, ಕಳಪೆ ಆಹಾರ ತಿಂದು ರಾಜ್ಯದಲ್ಲಿ ದಾಖಲಾಗಿದ್ದು, ಅನೇಕ ವಿಚಾರಗಳನ್ನು ವಿಜಯ ಕರ್ನಾಟಕದಲ್ಲಿ ಬಂದಿರುವ ವರದಿಯನ್ವಯ ಅವರು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ಹಿಂದೆ ಕೂಡ ಚರ್ಚೆಯಾಗಿದೆ. ನಾವು ಆ ಸಂಸ್ಥೆಗೆ ಗುತ್ತಿಗೆ ಕೊಡುವ ಬಗ್ಗೆ ಪರಿಶೀಲನೆಯನ್ನು ಮಾಡುತ್ತಿದ್ದೇವೆ. ವಿಶೇಷವಾಗಿ ಏನು ಪ್ರಸ್ತಾಪ

ಮಾಡಿದ್ದಾರೆ ಅದರ ಬಗ್ಗೆ ಇಲಾಖೆಯ ಪ್ರಮುಖರಿಗೆ ತಿಳಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಹಾಜರಿಲ್ಲ. ಶ್ರೀ ಸುನೀಲ್ ಹೆಗಡೆಯವರು ಮಾತನಾಡಿ.

11) ವಿಷಯ : ದಾಂಡೇಲಿ ನಗರದ ಕಾಳಿನದಿ ರ್‍ಯಾಫ್ಟಿಂಗ್‌ನ್ನು ಲೋಕಲ್ ನಿರುದ್ಯೋಗಿಗಳಿಗೆ ಕೊಡುವ ಬಗ್ಗೆ

ಶ್ರೀ ಸುನೀಲ್ ಎ. ಹೆಗಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ದಾಂಡೇಲಿ ನಗರದಲ್ಲಿ ಕಾಳಿ ನದಿಯಲ್ಲಿ ರ್‍ಯಾಫ್ಟಿಂಗ್ ಮಾಡುವ ಬಗ್ಗೆ ಮೊನ್ನೆ ಟೆಂಡರ್ ಕರೆದಿದ್ದರು. ಈ ಹಿಂದೆ ಜಂಗಲ್ ಲಾಡ್ಜಸ್‌ರವರು ರ್‍ಯಾಫ್ಟಿಂಗ್ ನಡೆಸುತ್ತಾ ಬಂದಿದ್ದರು. ಆದರೆ ಸರ್ಕಾರಕ್ಕೆ ಯಾವುದೇ ರೀತಿಯ ಆದಾಯ ಬರಲಿಲ್ಲವೆಂದು ಅಲ್ಲಿನ ಸ್ಥಳೀಯ ಅರಣ್ಯ ಸಂರಕ್ಷಣಾಧಿಕಾರಿಗಳು ಅದನ್ನು ಲೋಕಲ್ resource ಗಳನ್ನು ಮಾಡಿರುವವರಿಗೆ, White rafting ಸಂಘ ಮಾಡಿಕೊಂಡಿರುವ ಲೋಕಲ್ ನಿರುದ್ಯೋಗಿ ಯುವಕರೇನಿದ್ದಾರೆ ಅವರುಗಳನ್ನು ಕರೆದು ಲಕ್ಷಾಂತರ ರೂಪಾಯಿಗಳಿಗೆ ಟೆಂಡರ್ ಕೊಟ್ಟಿದ್ದರು. ಈಗಾಗಲೇ ಎರಡು ವರ್ಷದಲ್ಲಿ ಲಕ್ಷಾಂತರ ರೂಪಾಯಿ ಲಾಭ ಅರಣ್ಯ ಇಲಾಖೆಗೆ ಬಂದಿದೆ. ಈಗ ಅಧಿಕಾರಿಗಳು ಮತ್ತು ಜಂಗಲ್ ಲಾಡ್ಜಸ್‌ನವರೆಲ್ಲ ಸೇರಿಕೊಂಡು ಇದನ್ನು ಕೇವಲ ಜಂಗಲ್ ಲಾಡ್ಜಸ್‌ನವರಷ್ಟೇ ಮಾಡಬೇಕು ಬೇರೆಯವರಿಗೆ ಕೊಡುವುದಿಲ್ಲವೆಂಬ ದೃಷ್ಟಿಯಿಂದ ಅದನ್ನು ಬಂದ್ ಮಾಡಿದ್ದಾರೆ. ಜಂಗಲ್ ಲಾಡ್ಜಸ್‌ನವರಿಗೆ ಕೊಡುವ ಹಣ ಏನಿದೆ, ಬಡವರ್‍ಯಾರೂ ಆ ರೆಸಾರ್ಟ್‌ನಲ್ಲಿ ಉಳಿದುಕೊಂಡು ರ್‍ಯಾಫ್ಟಿಂಗ್‌ನ್ನು ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಅದಕ್ಕೆ ನನ್ನ ವಿನಂತಿ ಏನೆಂದರೆ ಜಂಗಲ್ ಲಾಡ್ಜಸ್‌ಗೆ ರ್‍ಯಾಫ್ಟಿಂಗ್ ಕೊಡದೆ ಲೋಕಲ್ ನಿರುದ್ಯೋಗಿ ಯುವಕರಿಗೆ, resource ಮಾಡುವವರು, ಬೇರೆ ಬೇರೆ ಯಾರಿದ್ದಾರೆ ಅವರಿಗೆಲ್ಲಾ ಆ ಟೆಂಡರ್‌ನಲ್ಲಿ ಭಾಗವಹಿಸಿ ಸ್ಥಳೀಯವಾಗಿ ಅವರಿಗೆ ಕೊಡುವಂತಹ ವ್ಯವಸ್ಥೆ ಯಾಗಬೇಕು. ಜಂಗಲ್ ಲಾಡ್ಜಸ್‌ನವರಿಗೆ ಕೊಡುವ ವ್ಯವಸ್ಥೆಯಾಗಬಾರದು. ಇದರಿಂದ ಸ್ಥಳೀಯ ನಿರುದ್ಯೋಗಿ ಯುವಕರಿಗೆ ತೊಂದರೆಯಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ದಾಂಡೇಲಿಯಲ್ಲಿ ಈಗಾಗಲೇ ಕೈಗಾರಿಕೆಗಳನ್ನು ಮುಚ್ಚಿ ಎಲ್ಲಾ ನಿರುದ್ಯೋಗಿ